ಈ) ಗುರುತಿಸಿದ್ದಲ್ಲಿ, ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ನಿಗದಿ ಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಅನುದಾನ ಲಭ್ಯತೆಯನ್ನು ಅನುಸರಿಸಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಕುಮಟ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಕಟ್ಟಲು ಸ್ಥಳ ಇರುವುದಿಲ್ಲ. ಆದುದರಿಂದ ಈಗಿರುವ ತಹಶೀಲ್ದಾರರ ಕಾರ್ಯಾಲಯದ ಸ್ಥಳದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ಮಿನಿವಿಧಾನ ಸೌಧದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಜಿಲ್ಲಾ ಖಜಾನೆಗಳಲ್ಲಿ ಪಿಂಚಣಿ ಪಾವತಿಯಾಗದಿರುವ ಬಗ್ಗೆ

84 (1052) ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ತಹಶೀಲ್ದಾರರ ಕಛೇರಿಯಿಂದ ಮಂಜೂರಾದ ಸಂಧ್ಯಾ ಸುರಕ್ಷಾ/ವೃದ್ಧಾಪ್ಯ ವಿಧವಾ ಮತ್ತು ಅಂಗವಿಕಲ ಪಿಂಚಣಿಯೂ ರಾಜ್ಯದ ಜಿಲ್ಲಾ ಖಜಾನೆಗಳಲ್ಲಿ ಪಾವತಿ ಆಗದೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜಿಲ್ಲಾ ಖಾನೆಗಳಲ್ಲಿ ಸಂಧ್ಯಾ ಸುರಕ್ಷಾ/ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲ ಪಿಂಚಣಿ ಪಾವತಿ ಆಗದೇ ಬಾಕಿ ಉಳಿದಿರುವ ಪ್ರಕರಣಗಳೆಷ್ಟು;

ಇ) ಪಿಂಚಣಿ ಹಣ ಪಾವತಿ ಬಾಕಿಯಿರಿಸಲು ಹಣಕಾಸು ಮುಗ್ಗಟ್ಟು ಕಾರಣವೇ; ಮಂಜೂರಾತಿಗಾಗಿ ಪಿಂಚಣಿ ನಿರೀಕ್ಷೆಯಲ್ಲಿರುವ ನೊಂದವರಿಗೆ ಎಷ್ಟು ದಿನಗಳಲ್ಲಿ ಪಿಂಚಣಿ ಬಾಕಿ ಹಣವನ್ನು ನೀಡಲಾಗುವುದು;

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಜಿಲ್ಲಾ ಖಜಾನೆಗಳಲ್ಲಿ ಬಾಕಿ ಇರುವ ಪ್ರಕರಣಗಳು :

ಸಂಧ್ಯಾ ಸುರಕ್ಷಾ	67813
ವಿಧವಾ ವೇತನ	16895
ವೃದ್ಧಾಪ್ಯ ವೇತನ	2205
ಅಂಗವಿಕಲ ವೇತನ	8436
ಒಟ್ಟು	**95349**

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಪಿಂಚಣಿ ಹಣ ಪಾವತಿ ಬಾಕಿಯಿರಿಸಲು ಹಣಕಾಸು ಮುಗ್ಗಟ್ಟು ಕಾರಣವಲ್ಲ. ಆದರೆ 2007–08ನೇ ಸಾಲಿನಲ್ಲಿ 19.48 ಲಕ್ಷಗಳಷ್ಟು ಇದ್ದ ಫಲಾನುಭವಿಗಳ ಸಂಖ್ಯೆ 2009–10ನೇ ಸಾಲಿಗೆ 35.05 ಲಕ್ಷದಷ್ಟು ಆಗಿರುತ್ತದೆ. ಅಂದರೆ 2009–10ನೇ ಸಾಲಿಗೆ ಶೇಕಡ 80 ರಷ್ಟು ಹೆಚ್ಚಾಗಿರುತ್ತದೆ. ಆದರೆ ಜಿಲ್ಲಾ ಖಜಾನೆ ಹಾಗೂ ತಾಲ್ಲೂಕು ಖಜಾನೆಗಳಲ್ಲಿ ಪಿಂಚಣಿ ವಿತರಿಸಲು ಸಿಬ್ಬಂದಿಯ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದಿಲ್ಲ ಮತ್ತು ಅಂಚೆ ಇಲಾಖೆಯ ಮೂಲಕ ಪಿಂಚಣಿಯನ್ನು ವಿತರಿಸುತ್ತಿರುವುದರಿಂದ ಫಲಾನುಭವಿಗಳ ಹೆಚ್ಚಳಿಕೆಯಿಂದಾಗಿ ಅಂಚೆ ಇಲಾಖೆಯ ಸಿಬ್ಬಂದಿಯ ಮೇಲೆ ಸಾಕಷ್ಟು ಹೊರೆಯಾಗಿರುತ್ತದೆ.

ವೇತನ ಪಾವತಿಯ ವಿಧಾನದಲ್ಲಿ ಪಾರದರ್ಶಕತೆ ಮತ್ತು ಶೀಘ್ರ ವಿಲೇವಾರಿ ಮಾಡಲು ಇ–ಮನಿಆರ್ಡರ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಸಾಧ್ಯವಾದ ಮಟ್ಟಿಗೆ ಅಂಚೆ ಕಛೇರಿ ಮತ್ತು ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಯ ಮೂಲಕ ವಿತರಿಸಲು ಫಲಾನುಭವಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ ಹಾಗೂ ಮಾಹಿತಿ ತಂತ್ರಜ್ಞಾನ ಆಧಾರಿತ ವೇತನ ಪಾವತಿ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಹಯೋಗದೊಂದಿಗೆ 6 ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಕ್ರಮಗಳಿಂದ ಶೀಘ್ರದಲ್ಲಿ ಬಾಕಿ ಪಿಂಚಣಿದಾರರಿಗೆ ಪಿಂಚಣಿ ಹಣವನ್ನು ಪಾವತಿಸಲು ಸಾಧ್ಯವಾಗುತ್ತದೆ.

ಅನುಬಂಧ – 1					
ಕ್ರ ಸಂ.	ಜಿಲ್ಲೆಗಳ ಹೆಸರು	ವೃದ್ಧಾಪ್ಯ ವೇತನ	ಅಂಗವಿಕಲ ವೇತನ	ವಿಧವಾ ವೇತನ	ಸಂಧ್ಯಾ ಸುರಕ್ಷಾ ಯೋಜನೆ
1	ಬೆಂಗಳೂರು ನಗರ	780	1709	2340	4213
2	ಬೆಂಗಳೂರು ಗ್ರಾಮಾಂತರ	0	0	0	1149
3	ಬೆಳಗಾವಿ	0	0	0	2804
4	ಬಾಗಲಕೋಟೆ	28	379	838	1114
5	ಬಳ್ಳಾರಿ	0	0	0	2552
6	ಬೀದರ್	0	0	0	3285
7	ಬಿಜಾಪುರ	0	0	238	3703
8	ಚಾಮರಾಜನಗರ	0	338	383	837
9	ಚಿಕ್ಕಮಗಳೂರು	0	0	0	2253
10	ಚಿತ್ರದುರ್ಗ	0	0	1288	3640
11	ಚಿಕ್ಕಬಳ್ಳಾಪುರ	0	0	0	1469
12	ದಾವಣಗೆರೆ	260	1234	1330	2315
13	ಧಾರವಾಡ	144	394	368	1485
14	ದಕ್ಷಿಣ ಕನ್ನಡ	0	0	717	1171
15	ಗದಗ	0	0	984	147
16	ಗುಲ್ಬರ್ಗಾ	0	50	360	1039
17	ಹಾಸನ	280	550	975	0
18	ಹಾವೇರಿ	14	348	900	685
19	ಕೋಲಾರ	525	574	612	1632
20	ಕೊಪ್ಪಳ	0	0	0	1707
21	ಕೊಡಗು	3	121	222	373
22	ಮಂಡ್ಯ	0	0	0	4482
23	ಮೈಸೂರು	0	0	0	2147

24	ರಾಯಚೂರು	24	397	1351	2313
25	ರಾಮನಗರ	0	528	1580	2313
26	ಶಿವಮೊಗ್ಗ	19	432	635	4892
27	ತುಮಕೂರು	92	1089	1128	13132
28	ಉತ್ತರ ಕನ್ನಡ	36	20	152	403
29	ಉಡುಪಿ	0	273	494	558
	ಒಟ್ಟು	**2205**	**8436**	**16895**	**67813**
					95349

ಕೆ.ಪಿ.ಎ.ಡಿ.ಐ ಯಿಂದ ಮೈಸೂರಿಲ್ಲಿ ಭೂಸ್ವಾಧೀನ

85 (547) ಶ್ರೀ ಪುಟ್ಟರಾಜು ಪಿ.ಎಸ್. (ಮೇಲುಕೋಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ, ಮೈದನಹಳ್ಳಿ, ಇಲವಾಲ ಮತ್ತು ಕೂರ್ಗಳ್ಳಿ ಗ್ರಾಮಗಳಿಗೆ ಸೇರಿದ ಜಮೀನುಗಳನ್ನು ಕೆ.ಐ.ಎ.ಡಿ.ಬಿ. ಯವರು ಕೈಗಾರಿಕಾಭಿವೃದ್ಧಿಗಾಗಿ ವಶಪಡಿಸಿ ಕೊಂಡ ಜಮೀನಿನ ವಿಸ್ತೀರ್ಣವೆಷ್ಟು; (ಸರ್ವೆ ನಂಬರ್‌ನ ಸಹಿತ ಮಾಹಿತಿ (ನೀಡುವುದು);

ಆ) ಅಂತಿಮ ಅಧಿಸೂಚನೆ ಹೊರಡಿಸುವಾಗ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು; (ಸರ್ವೆ ನಂಬರ್‌ನ ವಿಸ್ತೀರ್ಣದ ಮಾಹಿತಿ ನೀಡುವುದು);

ಇ) ವಶಪಡಿಸಿಕೊಳ್ಳಲಾದ ಜಮೀನುಗಳನ್ನು ಕೈಬಿಡಲು ಕಾರಣಗಳೇನು (ಮಾಹಿತಿ ನೀಡುವುಉ);

ಈ) ಜಮೀನುದಾರರಿಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ; (ಸರ್ವೆ ನಂಬರ್ ವಾರು ಹಾಗೂ ವಿಸ್ತೀರ್ಣವಾರು ಮಾಹಿತಿ ನೀಡುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ, ಮೈದನಹಳ್ಳಿ, ಇಲವಾಲ ಮತ್ತು ಕೂರ್ಗಳ್ಳಿ ಗ್ರಾಮಗಳಲ್ಲಿ ಒಟ್ಟು